ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರ ಗುತ್ತಿಗೆದಾರರ ನೇಮಕ

87 (524) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಗೌರಿಬಿದನೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ವಚ್ಚತಾ ಕಾರ್ಯಕ್ಕಾಗಿ ಗುತ್ತಿಗೆದಾರರನ್ನು ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗುತ್ತಿಗೆದಾರರು ಆಸ್ಪತ್ರೆಯನ್ನು ಸರಿಯಾಗಿ ನಿರ್ವಹಣೆ ಮಾಡದೆ ಇರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇವರ ಗುತ್ತಿಗೆಯನ್ನು ರದ್ದುಪಡಿಸಿ ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿ ಈ ಆಸ್ಪತ್ರೆಯ ಸ್ವಚ್ಚತಾ ಕಾರ್ಯಕ್ಕೆ ಕ್ರಮ ವಹಿಸಲಾಗುವುದೇ;

ಈ) ಹಾಗಿದ್ದಲ್ಲಿ, ಈ ಸಂಬಂಧ ಯಾವಾಗ ಕ್ರಮ ವಹಿಸಲಾಗುವುದು?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಹಲವು ಸಂಘ ಸಂಸ್ಥೆಗಳು, ಸಾರ್ವಜನಿಕರರು ಹಾಗೂ ಸ್ಥಳೀಯ ಶಾಸಕರು ನೀಡಿರುವ ದೂರಿನಂತೆ, ಲೋಪದೋಷಗಳನ್ನು ಸರಿಪಡಿಸುವಂತೆ ಗುತ್ತಿಗೆದಾರರಿಗೆ ಆಡಳಿತ ವೈದ್ಯಾಧಿಕಾರಿಗಳು ನೋಟೀಸ್ ನೀಡಿರುತ್ತಾರೆ. ಪ್ರಸ್ತುತ ಈಗ ರೋಗಿಗಳಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) ಮತ್ತು ಈ)

ಸದರಿ ಗುತ್ತಿಗೆದಾರರ ಅವಧಿ ದಿನಾಂಕ: 31.03.2013 ರವರೆಗೆ ಜಾರಿಯಲ್ಲಿರುತ್ತದೆ. ಆದರೆ ಸದರಿ ಗುತ್ತಿಗೆದಾರರು ಗುತ್ತಿಗೆ ಷರತ್ತುಗಳಿಗೆ

ವಿರುದ್ಧವಾಗಿ, ಆಸ್ಪತ್ರೆಯ ಸ್ವಚ್ಚತೆಗೆ ದಕ್ಕೆಯಾದಾಗ ಗುತ್ತಿಗೆಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿ ರದ್ದುಪಡಿಸಬಹುದಾಗಿದೆ. ಹೊರ ಗುತ್ತಿಗೆ ಆಧಾರದಲ್ಲಿ ಸ್ವಚ್ಚತಾ ಕಾರ್ಯಕ್ಕೆ ನೇಮಕ ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆಸ್ಪತ್ರೆಗಳಲ್ಲಿ ಸ್ವಚ್ಛ ಮಾಡುವುದರ ಬಗ್ಗೆ ಜಿಲ್ಲಾಧಿಕಾರಿಗಳು ವರ್ಷಕ್ಕೆ ಒಂದು ಸಲ ಗುತ್ತಿಗೆ ಕೊಡುತ್ತಾರೆ. ಅದರಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತವೆ. ಒಬ್ಬರೇ ಪಾರ್ಟಿ ಬೇರೆ ಬೇರೆ ಹೆಸರಿನಲ್ಲಿ ಒಂದು ರಿಂಗ್ ಮಾಡಿಕೊಳ್ಳುತ್ತಾರೆ. ಆ ರಿಂಗ್ ಮಾಡಿಕೊಂಡು ಗುತ್ತಿಗೆಯನ್ನು ಪಡೆಯುತ್ತಾರೆ. ಅವರು ಬೇಕಾದಂಥ ಸಿಬ್ಬಂದಿಯನ್ನು ಇಟ್ಟುಕೊಳ್ಳುವುದಿಲ್ಲ. ಕಡಿಮೆ ಸಿಬ್ಬಂದಿಯನ್ನು ಇಟ್ಟುಕೊಳ್ಳುತ್ತಾರೆ. ಹೆಚ್ಚು ಹಣ ಉಳಿಸಿಕೊಳ್ಳುವುದಕ್ಕೆ ಸರಿಯಾದ ಸಮಯಕ್ಕೆ ಬಾತ್‌ರೂಂಗಳು ಮತ್ತು ಟಾಯ್‌ಲೆಟ್‌ಗಳನ್ನು ಸರಿಯಾದ ರೀತಿಯಲ್ಲಿ ಕ್ಲೀನ್ ಮಾಡುತ್ತಿಲ್ಲ. ಆ ಸಮಿತಿಯಲ್ಲಿ ಶಾಸಕರುಗಳು ಇದ್ದರೂ ಕೂಡ ಸರಿಯಾಗಿ ಅದನ್ನು ಮಾನಿಟರ್ ಮಾಡುವುದಕ್ಕಾಗುತ್ತಿಲ್ಲ. ಗುತ್ತಿಗೆದಾರು ಇದರಲ್ಲಿ ಬಹಳಷ್ಟು ಹಣವನ್ನು ಲಪಟಾಯಿಸುವಂಥದ್ದು ಆಗುತ್ತದೆ. ಊಟ, ಹಾಲು ಮತ್ತು ಬ್ರೆಡ್ ಕೊಡುವುದರಲ್ಲಿ ಒಂದು ದೊಡ್ಡ ದಂಧೆ ನಡೆಯುತ್ತಿರುವುದು ನನ್ನ ಗಮನಕ್ಕೆ ಕೂಡ ಬಂದಿದೆ. ಈ ಹೌಸ್ ಕೀಪಿಂಗ್ ಮಾಡತಕ್ಕಂಥವರಿಗೆ ಯಾವುದೇ ಒಂದು ಸ್ಟ್ಯಾಂಡರ್ಡ್ ಏಜೆನ್ಸಿಯಿಂದ ಸರ್ಟಿಫಿಕೇಶನ್ ಇಲ್ಲ. ಯಾರದೋ ಒಬ್ಬರ ಹೆಸರಿಯಲ್ಲಿ ಅವರ ಅರ್ಹತೆ ಇರುವಂಥದ್ದು. ಯಾವುದೂ ಕೂಡ ಸರ್ಟಿಫೈ ಮಾಡತಕ್ಕಂಥ ಏಜೆನ್ಸಿಯಿಂದ ಕೂಡ ಮಾನಿಟರ್ ಮಾಡುತ್ತಿಲ್ಲ ಹಾಗಾಗಿ ಇದರಲ್ಲಿ ಬಹಳಷ್ಟು ದಂಧೆ ಆಗುತ್ತಿದೆ. ಜೊತೆಗೆ ಆಸ್ಪತ್ರೆಯಲ್ಲಿ ಸೆಕ್ಯೂರಿಟಿ ಇಲ್ಲದೇ ಇರುವುದರಿಂದ ಆಸ್ಪತ್ರೆಗಳಲ್ಲಿ ಸಾರ್ವಜನಿಕರು ಜಾಸ್ತಿಯಾಗಿ ಪೇಷೆಂಟ್‌ಗಳಿಗೆ ಬಹಳ ತೊಂದರೆ ಆಗುತ್ತಿದೆ. ಸೆಕ್ಯೂರಿಟಿ ಮಾಡುವುದಕ್ಕೆ ಇದರಲ್ಲಿ ಅಳವಡಿಸಿಕೊಂಡರೆ ನಿರ್ವಹಣೆ ಕೂಡ ಚೆನ್ನಾಗಿ ಆಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಪರಿಗಣಿಸಬೇಕೆಂದು ಕೋರುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆಸ್ಪತ್ರೆಯ ಸ್ವಚ್ಛತೆ ವಿಷಯವಾಗಿ ಪ್ರಶ್ನೆಯನ್ನು ಎತ್ತಿದ್ದಾರೆ. 28–6–2012 ರಂದು 2012–13ನೇ ಸಾಲಿಗೆ ಶಿವಶಕ್ತಿ ಎಂಟರ್ ಪ್ರೈಸೆಸ್, ಚಿಕ್ಕಬಳ್ಳಾಪುರ ಇವರಿಗೆ ಟೆಂಡರ್ ಅವಾರ್ಡ್ ಆಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ಇರುತ್ತದೆ. ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಇದನ್ನು ಅಪ್ರೂವಲ್ ಮಾಡುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಶಿವಶಕ್ತಿ ಎಂಟರ್ ಪ್ರೈಸೆಸ್‌ನವರಿಗೆ ಗೌರಿಬಿದನೂರು ಆಸ್ಪತ್ರೆಯ ಟೆಂಡರ್ ಆಗಿದೆ ಮಾನ್ಯ ಶಾಸಕರು ಮತ್ತು ಕೆಲವು ಸಂಘ ಸಂಸ್ಥೆಗಳವರು ಆ ರೀತಿಯ ದೂರುಗಳನ್ನು ಹೇಳುತ್ತಿದ್ದಾರೆ. ಈಗಾಗಲೇ ನಮ್ಮ ವೈದ್ಯಾಧಿಕಾರಿಗಳು ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಅಗತ್ಯ ಬಿದ್ದರೆ KTPP ACT ಅಡಿಯಲ್ಲಿ ಇನ್ನು ಹೆಚ್ಚು ಗ್ರಿವೆನ್ಸೆಸ್ ತಾವು ಹೇಳುತ್ತಿರುವುದರಿಂದ ನಮ್ಮ ಪ್ರಧಾನ ಕಾರ್ಯದರ್ಶಿಗಳ ಮಟ್ಟದಲ್ಲಿ ಅದಕ್ಕೆ ಸಮಿತಿ ಕೂಡ ಇರುತ್ತದೆ. ಗ್ರಿವೆನ್ಸ್ ಸಮೇತ ತಾವು ಅಲ್ಲಿ ಪ್ರೆಸೆಂಟ್ ಮಾಡಿದರೆ ಅವರನ್ನು ಟರ್ಮಿನೇಡ್ ಮಾಡುವುದಕ್ಕೂ ಅವಕಾಶ ಇದೆ. ಆ ರೀತಿಯ ದೂರುಗಳನ್ನು ಆ ಸಮಿತಿಯ ಮುಂದೆ ತೆಗೆದುಕೊಂಡು ಹೋಗಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಸದನದಲ್ಲಿ ತಿಳಿಸುತ್ತಿದ್ದೇನೆ. ಅವರ ಅವಧಿ 31.3.2013 ರವರೆಗೆ ಇರುತ್ತದೆ. ಅದನ್ನು ಸರಿಪಡಿಸುವುದಕ್ಕೆ ಏನೇನು ಕ್ರಮ ಇತ್ಯಾದಿ ಆಗಬೇಕು, ಅದು ಸರಿಪಡುವುದಿಲ್ಲವೆಂದರೆ KTPP ACT ಅಡಿಯಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಸಮಿತಿಯ ಮುಂದೆ ಅದನ್ನು ತೆಗೆದುಕೊಂಡು ಹೋಗಬಹುದು.

ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ರಿಕ್ವೆಸ್ಟ್ ಇದಕ್ಕೊಂದು ಮೆಕ್ಯಾನಿಸಂ ಯಾವಾಗ ಮಾಡಬೇಕು. ಈ ದಂಧೆಯನ್ನು avoid ಮಾಡುವುದಕ್ಕೆ ಯಾವುದಾದರೊಂದು ಮೆಕ್ಯಾನಿಸಂ ತರದೆ ಇದ್ದರೆ ಬಹುಶಃ ಇದು ಎಲ್ಲಾ ಆಸ್ಪತ್ರೆಗಳಿಗೆ ಆಗುತ್ತಿದೆ ಎಂದು ನಾನು ಭಾವಿಸುತ್ತೇನೆ. ಒಂದು ಮೆಕ್ಯಾನಿಸಂ ತರದಿದ್ದರೆ ಇದರಲ್ಲಿ ಬಹಳಷ್ಟು ಹಣ ಪೋಲಾಗುತ್ತದೆ. ನೀವು ಪ್ರತಿ ತಿಂಗಳು ಈಗ 75 ಸಾವಿರ ರೂ.ಗಳನ್ನು ಸರ್ಕಾರದಿಂದ ಕೊಡುತ್ತಿದ್ದೀರಿ. ಕೇವಲ 5–6 ಜನರನ್ನು ಇಟ್ಟುಕೊಂಡು

ಹಣವನ್ನು ಉಳಿಸಿಕೊಳ್ಳುತ್ತಾರೆ. ಇದಕ್ಕೆ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕೆಂದು ನನ್ನ ಮನವಿ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ಪರಿಶೀಲಿಸುತ್ತೇನೆ.

ಮಹಿಳಾ ವೈದ್ಯರ ನೇಮಕಾತಿ

88 (645) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮುಳಬಾಗಿಲು ತಾಲ್ಲೂಕಿನ ಹೋಬಳಿಗಳಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಮಹಿಳಾ ವೈದ್ಯರು ನೇಮಕಾತಿಯನ್ನು ಯಾವ ಅವಧಿಯೊಳಗಾಗಿ ಮಾಡಲಾಗುವುದು;

ಇ) ಹೋಬಳಿ ಮಟ್ಟದ ಆಸ್ಪತ್ರೆಗಳಲ್ಲಿ ರಾತ್ರಿಯ ಸಮಯದಲ್ಲಿ ವೈದ್ಯರುಗಳು ಇರುವ ಹಾಗೆ ಸರ್ಕಾರ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮತ್ತು ಆ)

ಆರೋಗ್ಯ ಇಲಾಖೆಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ ಪುರುಷ/ಮಹಿಳಾ ವೈದ್ಯಾಧಿಕಾರಿ ಹುದ್ದೆ ಎಂದು ಗುರುತಿಸಿರುವುದಿಲ್ಲ. ಆದರೂ ಮುಳಬಾಗಿಲು ತಾಲ್ಲೂಕು ಆಸ್ಪತ್ರೆಯಲ್ಲಿ ಇಬ್ಬರು ಸ್ತ್ರೀರೋಗ (ಮಹಿಳಾ) ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಮುಳಬಾಗಿಲು